ಈಗಲೂ ಆ ಮದುವೆಗಳ ಕುರಿತು ಅಮ್ಮ ಮಾತನಾಡುವುದು ಕೇಳಿದಾಗ ಸೀಮಂತಿನಿಗೆ ಮೈ ಝುಂ ಎನ್ನುತ್ತಿತ್ತು. ಸೋದರತ್ತೆಯರನ್ನು ಒಪ್ಪಿದ್ದ ಬೇರೆ ಬೇರೆ ಕಡೆಯ ಗಂಡಿನವರ ನಡವಳಿಕೆ... ಹೇಗೋ ನಡೆದುಹೋದ ಮದುವೆ ನಂತರ ಅತ್ತೆಯರಿಬ್ಬರೂ ಗಂಡನ ಮನೆಗೆ ಹೋದ ಮೇಲೆ ಅನುಭವಿಸಿದ ಕಿರುಕುಳ ನೆನೆದು ಸೀಮಂತಿನಿಯ ಹೃದಯ ಆರ್ದ್ರವಾಗಿತ್ತು.

ಕಾಲ ಬದಲಾಗಿದೆ ಎನಿಸುತ್ತಿತ್ತು. ಅತ್ತೆಯ ಕಾಲಘಟ್ಟ ಮುಗಿದು ಸೊಸೆಯ ಪರ್ವಕಾಲ ಶುರುವಾಗಿರುವುದರಲ್ಲಿ ಅಚ್ಚರಿಯೇನೂ ಇಲ್ಲ ಎಂದು ಸೀಮಂತಿನಿ ಮನಸಿನಲ್ಲೇ ವಿಷಾದದ ನಗೆ ನಕ್ಕಿದ್ದಳು. ಆದರೂ, ಅಮ್ಮ ಏನೇ ತನ್ನನ್ನು ಎಚ್ಚರಿಸಿದರೂ, ಮುಂದೆ ನೋಡಲು ಬರುವ ಹುಡುಗ ಯಾವನೇ ಆಗಿರಲಿ ಅವನನ್ನು ಹೇಗೆ ಎದುರಿಸಬೇಕು ಎಂಬ ಯೋಜನೆಯಲ್ಲೇ ಸಿದ್ಧವಾಗಹತ್ತಿದ್ದರಿಂದ ಸೀಮಂತಿನಿಯಂತೂ ನಿರುಮ್ಮಳವಾಗಿದ್ದಳು.

***

ಈ ಹಿಂದೆ ಎಂಟತ್ತು ಸಾರಿ ಹೀಗೆ ಆಗಿರಬೇಕು. ಬಂದ ಎಲ್ಲಾ ಹುಡುಗರು, ಅವರ ಅಪ್ಪ–ಅಮ್ಮ, ಮತ್ತಿತರ ಸಂಬಂಧಿಗಳದ್ದು ಅದೇ ನಾಟಕ. 'ಏನು ಓದಿದಿಯಮ್ಮ? ನೌಕರಿ ಎಷ್ಟು ವರ್ಷ ಆಯ್ತು? ಎಂಬ ಮಾಮೂಲು ಪ್ರಶ್ನೆಗಳನ್ನು ಕೇಳುವುದರಲ್ಲೇ ಸಮಯ ಮುಗಿಯುತ್ತಿತ್ತು... ಸೀಮಂತಿನಿಗೆ ಅನಿಸುತ್ತಿತ್ತು 'ಬರಿ ಹುಡುಗಿಯರ ವಿವರಗಳನ್ನೇ ಕೇಳುವುದಾಯಿತು, ಹುಡುಗನ ವಿವರಗಳನ್ನು ಯಾರು ಕೇಳಬೇಕು?' ಪ್ರತಿ ಸಾರಿ ಅಮ್ಮನ ಮನಸ್ಸಿನ ವಿರುದ್ಧ ಮಾತಾಡಬಾರದೆಂದು ಬಿಡುತ್ತಿದ್ದ ವಿಷಯವನ್ನು ಈ ಬಾರಿ ಅಮ್ಮ ಏನಾದರೂ ಅಂದುಕೊಳ್ಳಲಿ, ಧೈರ್ಯ ತಂದುಕೊಂಡು ಕೇಳೇಬಿಡಬೇಕು' ಎಂದು ಸೀಮಂತಿನಿ ನಿರ್ಧರಿಸಿ, ಸಂದರ್ಭಕ್ಕಾಗಿ ಕಾಯುತ್ತಿದ್ದಳು.

ಹುಡುಗನ ಕಡೆಯವರು ಬಂದಾಗ ಏನಾದರೂ ಯಡವಟ್ಟು ಉತ್ತರ ಕೊಟ್ಟರೆ ನಂತರ ಅಮ್ಮನ ಶೂಲದ ತುದಿಯ ಮೊನಚು ಮಾತುಗಳು ಸೀಮಂತಿನಿಯನ್ನು ತಿವಿಯುತ್ತಿದ್ದವು, ಜೊತೆಗೆ ಅಮ್ಮನ ಸಹನೆಯ ಕಟ್ಟೆ ಒಡೆದು, ಬೈಗುಳ ಆಣೆಕಟ್ಟು ಹರಿಯುತ್ತಿತ್ತು. 'ಕಾಲ ಎಷ್ಟೇ ಬದಲಾಗಲಿ... ಹೆಣ್ಣು ಹೆಣ್ಣೇ...' ಅಮ್ಮ ಹಳೆಯ ಕಾಲದ ಮಾತನ್ನು ಸಮರ್ಥಿಸಿಕೊಳ್ಳುತ್ತಿದ್ದಳು. ಇದು ಸೀಮಂತಿನಿಗೆ ಸುತರಾಂ ಇಷ್ಟವಿರಲಿಲ್ಲ. ಈ ಹಿಂದೆ ಹಲವು ಬಾರಿ ಆದದ್ದು ಹೀಗೆ ಅಲ್ಲವೆ? ಹುಡುಗ ಸ್ಥಳದಲ್ಲೇ ತನಗೆ ಒಪ್ಪಿಗೆ ಅಂತ ಸೂಚಿಸಿದ ಮೇಲೆ – 'ಅಮ್ಮ, ನಾನೊಂದಿಷ್ಟು ಹುಡುಗನ ಜೊತೆಗೆ ಮಾತನಾಡಬೇಕು...' ಎಂದು ಸೀಮಂತಿನಿ ಅನ್ನುತ್ತಲೇ ಹುಡುಗನ ತಾಯಿ 'ಏನು ಮಾತನಾಡುವುದಿದೆ? ಹುಡುಗ ಇಷ್ಟವಿದ್ದರೆ ಇಷ್ಟ ಅಂತ ಹೇಳಿ, ಇಲ್ಲವೆಂದಾದರೆ ಇಲ್ಲ...' ಅನ್ನುತ್ತಿದ್ದಾಗ ಹೆಣ್ಣಿಗೆ, ಅದೂ ಆಧುನಿಕ ಜಗತ್ತಿನ ಹೆಣ್ಣಿಗೆ ನೀಡಿದ ಸ್ವಾತಂತ್ರ್ಯ ಮತ್ತು ಸಮಾನತೆಯ ಹುಸಿ ವಿಚಾರಗಳ ಅರ್ಥವಾಗುತ್ತಿತ್ತು.

ಹಿಂದೊಮ್ಮೆ ಬಳ್ಳಾರಿ ಹುಡುಗನೊಬ್ಬನ ಪ್ರಸ್ತಾಪ ಬಂದಾಗ ಹೀಗೆ ಆಗಿತ್ತು. ಸೀಮಂತಿನಿ ಓದಿದ್ದು ಎಂ.ಟೆಕ್., ಹುಡುಗ ಓದಿದ್ದು ಬಿ.ಇ., ಹುಡುಗನದು ಎಂಟೂವರೆ ಲಕ್ಷ ಪ್ಯಾಕೇಜ್, ಸೀಮಂತಿನಿಯದು ಇಪ್ಪತ್ತು ಲಕ್ಷ ಪ್ಯಾಕೇಜ್! ಹೇಗೆ ಒಪ್ಪಬೇಕು ಎಂಬ ಪ್ರಶ್ನೆ ಸೀಮಂತಿನಿಯನ್ನು ಕಾಡಿತ್ತು. ಹುಡುಗ ಹುಡುಗಿಯನ್ನು ಒಪ್ಪಿದರೂ ಆತನಿಗೆ ಇನ್ನೊಂದು ರೀತಿಯಲ್ಲಿ ಕೀಳರಿಮೆ... ಹುಡುಗನಿಗಿಂತ ಹುಡುಗಿ ಹೆಚ್ಚು ಓದಿದ್ದು, ಸಂಬಳದಲ್ಲೂ ಹೆಚ್ಚಿರುವುದು ಬೇರೆಯವರ ಮುಂದೆ ಹೇಳಿಕೊಳ್ಳುವುದು ಹೇಗೆ? ಈ ವಿಷಯ ಹುಡುಗನ ಕಡೆಯವರಿಗೆ ಕಾಡಿ ಹುಡುಗ ಈ ಸಂಬಂಧಕ್ಕೆ ಒಪ್ಪಿದ್ದರೂ ಬೇರೆ ಷರತ್ತುಗಳನ್ನು ಮೊದಲೇ ಹಾಕಿದ್ದ. ಇದು ಮಧ್ಯವರ್ತಿಗಳಿಂದ ತಿಳಿದು ಬಂದು ಸಂಬಂಧ ಕುದುರದೆ ಹೋಗಿತ್ತು.

ಸೀಮಂತಿನಿಗೂ ಅದು ಇಷ್ಟವಾಗದೆ ಅಲ್ಲಿಗೆ ಆ ಅಧ್ಯಾಯ ಮುಗಿದಿತ್ತು. ಹೀಗೆ ಪ್ರತಿ ಸಾರಿ ಸೀಮಂತಿನಿಯನ್ನು ಕಾಡಿದ್ದು ಹೆಣ್ಣು ಗಂಡಿನ ಸಮಾನತೆ! ಇಲ್ಲಿಯ ತಾತ್ವಿಕ ಪ್ರಶ್ನೆ ಸೀಮಂತಿನಿಗೆ ಅರ್ಥವಾಗಲಿಲ್ಲ. ಹುಡುಗ ಹುಡುಗಿಯನ್ನು ಇಷ್ಟಪಡದಿದ್ದರೆ ಸರಿಹೋಯಿತಂತೆ... ಆದರೆ ಹುಡುಗಿ ಹುಡುಗನನ್ನು ತಿರಸ್ಕರಿಸಿದರೆ? ಊರತುಂಬ ಸುದ್ದಿ, ಹುಡುಗಿಯದು ತಗ್ಗಿಗೆ ಬಿದ್ದ ನಾಯಿ ಪಾಡು. ಎಲ್ಲರೂ ಆಳಿಗೊಂದರಂತೆ ಕಲ್ಲು ಹೊಡೆಯುವವರೆ!

ಸೀಮಂತಿನಿ ಅಷ್ಟು ರೂಪವತಿಯಲ್ಲ. ಬಣ್ಣವೂ ತಿಳಿಗಪ್ಪು. ಆದರೆ ಕಡುಗಪ್ಪು ಬಣ್ಣದ ಹುಡುಗರಿಗೂ ಬೆಳ್ಳನೆಯ ಹುಡುಗಿಯರು ಬೇಕು ಎಂಬ ವಿಚಾರ ಸೀಮಂತಿನಿಗೆ ಇರುಸು ಮುರುಸು ಅನಿಸುತ್ತಿತ್ತು. ಇಂತಹ ಹತ್ತಾರು ವಿಷಯಗಳಿದ್ದರೂ ಸೀಮಂತಿನಿಗೆ ಹುಡುಗಿಯಾಗಿ ನಾನೇಕೆ ಏನನ್ನೂ ಪ್ರಶ್ನೆ ಮಾಡಬಾರದು? ಇದಾವ ನ್ಯಾಯ ಎನಿಸಿತ್ತು. ಇಷ್ಟೆಲ್ಲ ನಡೆಯುತ್ತಿರುವುದು ಅಮ್ಮ ತನ್ನ ಜವಾಬ್ದಾರಿಯನ್ನು ಕಳೆದುಕೊಳ್ಳಬೇಕು ಎಂಬುದೇ ಆಗಿತ್ತು ಎಂಬ ಅನುಮಾನ ಸೀಮಂತಿನಿಯ ಮನದಲ್ಲಿ ನೆಲೆಯೂರಿತ್ತು. ಆಗಾಗ ಶಾರದೆ 'ನಾನು ಇನ್ನೆಷ್ಟು ದಿನ ಇರುತ್ತೇನೆ?' ಎನ್ನುತ್ತಲೇ ಮದುವೆ ಮಾಡಬೇಕೆಂಬ ಅವಸರದ ನಿರ್ಧಾರಗಳು ಸೀಮಂತಿನಿಗೆ ಹಿಡಿಸಿರಲಿಲ್ಲ.

ಅಮ್ಮ ಜೀವನದಲ್ಲಿ ಸಾಕಷ್ಟು ಕಷ್ಟಯುಂಡಿರುವುದು ನಿಜ. ಆ ಕಾರಣದಿಂದಲೇ ಮದುವೆಯ ನಂತರವೂ ಅಮ್ಮನನ್ನು ಬಿಟ್ಟು ಇರಲು ಸೀಮಂತಿನಿ ಸಿದ್ಧಳಿರಲಿಲ್ಲ. ಇಂತಹ ಕಾರಣಗಳನ್ನು ತಿಳಿದ ಗಂಡಸಿನ ಕಡೆಯವರ ಮನಸ್ಥಿತಿಯೆ ಬದಲಾಗಿ ಬಿಡುತ್ತಿತ್ತು. ಮದುವೆ ನಂತರ ಅಮ್ಮನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ತನ್ನ ಜೊತೆಗೆ ಇಟ್ಟುಕೊಳ್ಳುವ ಯೋಚನೆಗೂ ಇಂತಹ ಸಂಗತಿಗಳು ಬೆಂಬಲಿಸುತ್ತಿರಲಿಲ್ಲ. ಇಂತಹುದನ್ನು ತನ್ನನ್ನು ಮದುವೆಯಾಗುವ ಗಂಡು ಒಪ್ಪುತ್ತಾನಾ? ಎನ್ನುವ ಪ್ರಶ್ನೆ ಸೀಮಂತಿನಿಯನ್ನು ಕಾಡಿದ್ದರೆ, ಅದಕ್ಕೆ ಅವಳಮ್ಮ ಶಾರದೆಯ ವಿಚಾರದಲ್ಲಿ ವ್ಯತಿರಿಕ್ತವಿತ್ತು.

'ಹೇಗೋ ಒಂದು, ನಿನ್ನ ಮದುವೆಯಾದರೆ ಸಾಕು. ನಾನು ಹೇಗಾದರೂ ಬದುಕುತ್ತೀನಿ. ನಿನ್ನ ಅಣ್ಣಂದಿರ ಸಹಾಯ ಪಡೆದು...' ಎಂದು ಮದುವೆಯಾದ ನಂತರ ಹೆಂಡತಿಯರೊಂದಿಗೆ ಬೇರೆ ಮನೆ ಮಾಡಿ ಸುಖವಾಗಿದ್ದ ಇಬ್ಬರು ಗಂಡುಮಕ್ಕಳ ಕುರಿತು ಆಡುತ್ತಿದ್ದ ಮಾತು ಸೀಮಂತಿನಿಯ ಮೈ ಉರಿಯುವಂತೆ ಮಾಡಿ, ಅಣ್ಣ–ಅತ್ತಿಗೆಯರು ಅಮ್ಮನೊಂದಿಗೆ ಕಾಲು ಕೆರೆದು ಜಗಳವಾಡಿ ಬೇರೆ ಮನೆ ಮಾಡಿದ ಘಟನೆಗಳೆಲ್ಲವೂ ನೆನಪಾಗುತ್ತಿದ್ದವು. ಅಮ್ಮನ ಸ್ವಭಾವ ಹೇಗೆಂದರೆ, ಸೀಮಂತಿನಿಗೆ ಗಂಡನಾಗಿ ಬರಲಿರುವ ಹುಡುಗ ತನ್ನ ಬಗ್ಗೆ ಯೋಚಿಸಬೇಕೆಂಬ ಅಗತ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ಸಿದ್ಧಳಾಗಿದ್ದಳು. ಹೆಣ್ಣೆಂದರೆ, ಹೀಗೆ ಇರಬೇಕು... ಕಷ್ಟ ಸಹಿಸಬೇಕು... ಸಹನಾ ಮೂರ್ತಿಯೆ ಹೆಣ್ಣು... ಎಂದೆಲ್ಲಾ ಈಗಲೂ ಯೋಚಿಸುವ ಅಮ್ಮನ ಯೋಚನೆಗೆ ಸೀಮಂತಿನಿ ಮರುಗುತ್ತಿದ್ದಳು.

***

ಈ ಬಾರಿ ಸೀಮಂತಿನಿಯನ್ನು ನೋಡಲು ಬರಲಿರುವ ಹುಡುಗನ ವರ್ತನೆ ಬೇರೆಯಾಗಿತ್ತು. 'ನಾನು ಹುಡುಗಿಯನ್ನು ನೋಡಲು ಬರುವ ಮೊದಲೆ ಒಂದು ಸಾರಿ ಹುಡುಗಿಯ ಜೊತೆ ವೈಯಕ್ತಿಕವಾಗಿ ಮಾತನಾಡಬೇಕು... ಅವರಿಗೆ ಒಪ್ಪಿಗೆ ಇದ್ದರೆ ಸರಿ, ಇರದಿದ್ದಲ್ಲಿ ಸಮಸ್ಯೆ ಇಲ್ಲ...' ಎಂದು ಮಧ್ಯವರ್ತಿಗಳ ಜೊತೆ ಮೊದಲೇ ಹೇಳಿ ಕಳಿಸಿದ್ದ ಆ ಹುಡುಗನ ಭಾವನೆ ಕನ್ನಡಿಯಂತೆ ಪ್ರತಿಫಲಿಸಿತ್ತು.

ಹೀಗೆ, ಹುಡುಗರು ಕೇಳಿದ್ದರೆ ಅವರೊಂದಿಗೆ ಮಾತನಾಡದಷ್ಟು ಬಿಗುಮಾನದ ಸ್ವಭಾವದವಳಲ್ಲ ಸೀಮಂತಿನಿ. ಮದುವೆ ಒಂದು ಆದರ್ಶದ ಕಟ್ಟಳೆ ಅಥವಾ ಸಂಪ್ರದಾಯದ ಚೌಕಟ್ಟು ಮಾತ್ರವಲ್ಲ, ಅದರಾಚೆನದು, ಪರಸ್ಪರ ಪ್ರೀತಿ–ನಂಬಿಕೆಯ ಬದುಕು, ಮತ್ತೇನೋ... ಎಂದು ನಂಬಿದ್ದ ಸೀಮಂತಿನಿಗೆ ತನ್ನ ಅಮ್ಮನಂಥವರಿಗೆ ಮದುವೆ ಒಂದು ಕಡ್ಡಾಯದ ವ್ರತ